**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ಃ 167/2021**

**ಫಿರ್ಯಾದುದಾರರುಃ** ರಾಜ್ಯದ ಪರ ಆಲೂರು ಪೊಲೀಸರು

ವಿರುದ್ಧ

**ಆರೋಪಿ** **ಪುಟ್ಟರಾಜು**

**ಃದೋಷಾರೋಪಣೆಃ**

**ಹಾಸನದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶನಾದ ಟಿ.ಎಸ್. ಇನವಳ್ಳಿ,** ನಾನು,

ಆರೋಪಿ,

ಪುಟ್ಟರಾಜು,
ತಂದೆ ಲೇಟ್ ಬೀರೇಗೌಡ,
ವಯಸ್ಸು 47 ವರ್ಷ,
ಮಡಬಲು ಗ್ರಾಮ,
ಪಾಳ್ಯ ಹೋಬಳಿ,
ಆಲೂರು ತಾಲ್ಲೂಕು,
ಹಾಸನ ಜಿಲ್ಲೆ

ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕ 01.09.2020 ರಂದು ಸಂಜೆ ಸುಮಾರು 4.50 ಗಂಟೆ ಸಮಯದಲ್ಲಿ, ಈ ನ್ಯಾಯಾಲಯದ ವ್ಯಾಪ್ತಿಗೆ ಸೇರಿದ ಆಲೂರು ಪೊಲೀಸ್ ಠಾಣಾ ಸರಹದ್ದಿನ ಪಾಳ್ಯ ಹೋಬಳಿ, ಮಡಬಲು ಗ್ರಾಮದ ಗ್ರಾಮ ಪಂಚಾಯಿತಿ ಕಛೇರಿಯ ಕಂಪ್ಯೂಟರ್ ಕೊಠಡಿಯಲ್ಲಿ ಚಾಸಾ.1 ಮಹಮ್ಮದ್ ಹೆಚ್.ಎಂ. ರವರು ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ನೀವು ಆರೋಪಿ ಅಲ್ಲಿಗೆ ಬಂದು, ನನಗೆ ಮೆಣಸು ಬೆಳೆಯಲು ಸಹಾಯ ಧನ ಕೊಡಲಿಲ್ಲ, ಬೋಳಿ ಮಗನೆ, ಸೂಳೆ ಮಗನೆ, ಎಂದು ಚಾಸಾ-1 ನೇಯವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡುವ ರೀತಿ ಮಾಡಿದ್ದೀರಿ ಮತ್ತು ಈ ಕಾರಣದಿಂದ ನೀವು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 504 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ, ನೀವು ಆರೋಪಿ ಚಾಸಾ-1 ರವರೊಂದಿಗೆ ಗಲಾಟೆ ಮಾಡಿ, ನಿನ್ನನ್ನು ಈ ದಿವಸ ಕೊಲೆ ಮಾಡುತ್ತೇನೆಂದು

ಚಾಸಾ.1 ರವರನ್ನು ಕೊಲೆ ಮಾಡುವ ಉದ್ದೇಶದಿಂದ, ಕೈಯಲ್ಲಿದ್ದ ಲಾಂಗ್ ಮಚ್ಚನ್ನು ಬೀಸಿ, ಆತನನ್ನು ಕೊಲೆ ಮಾಡಲು ಪ್ರಯತ್ನಪಟ್ಟಿರುತ್ತೀರಿ ಮತ್ತು ಈ ಕಾರಣದಿಂದ ನೀವು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 307 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಮೂರನೆಯದಾಗಿ, ಈ ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ, ನೀವು ಆರೋಪಿ ಚಾಸಾ-1 ರವರೊಂದಿಗೆ ಗಲಾಟೆ ಮಾಡಿ, ನಿನ್ನನ್ನು ಈ ದಿವಸ ಕೊಲೆ ಮಾಡುತ್ತೇನೆಂದು ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ, ಕೈಯಲ್ಲಿದ್ದ ಲಾಂಗ್ ಮಚ್ಚನ್ನು ಬೀಸಿ ಕೊಲ್ಲಲು ಪ್ರಯತ್ನಪಟ್ಟಾಗ ಚಾಸಾ-1 ರವರು ಕುತ್ತಿಗೆ ಸ್ವಲ್ಪ ಬಲಕ್ಕೆ ಬಾಗಿದಾಗ ಲಾಂಗ್ ಮಚ್ಚು ಚಾಸಾ-1 ರವರ ಎಡಭುಜಕ್ಕೆ ತಗುಲಿ ಸರ್ಕಾರಿ ನೌಕರರಾದ ಚಾಸಾ-1 ನೇಯವರಿಗೆ ಆತನ ಸಾರ್ವಜನಿಕ ಕರ್ತವ್ಯ ಮಾಡದಂತೆ ಅಡ್ಡಿಪಡಿಸಿರುತ್ತೀರಿ ಮತ್ತು ಈ ಕಾರಣದಿಂದ ನೀನು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 353 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ನಾಲ್ಕನೆಯದಾಗಿ, ಈ ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ, ನೀವು ಆರೋಪಿ ಚಾಸಾ-1 ರವರೊಂದಿಗೆ ಗಲಾಟೆ ಮಾಡಿ, ನಿನ್ನನ್ನು ಈ ದಿವಸ ಕೊಲೆ ಮಾಡುತ್ತೇನೆಂದು ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ, ಕೈಯಲ್ಲಿದ್ದ ಲಾಂಗ್ ಮಚ್ಚನ್ನು ಬೀಸಿ ಕೊಲ್ಲಲು ಪ್ರಯತ್ನಪಟ್ಟಾಗ ಚಾಸಾ-1 ರವರು ಕುತ್ತಿಗೆ ಸ್ವಲ್ಪ ಬಲಕ್ಕೆ ಬಾಗಿದಾಗ ಲಾಂಗ್ ಮಚ್ಚು ಚಾಸಾ-1 ರವರ ಎಡಭುಜಕ್ಕೆ ತಗುಲಿ ಸರ್ಕಾರಿ ನೌಕರರಾದ ಚಾಸಾ-1 ನೇಯವರಿಗೆ ಆತನ ಸಾರ್ವಜನಿಕ ಕರ್ತವ್ಯ ಮಾಡದಂತೆ ಅಡ್ಡಿಪಡಿಸಿ ಆತನನ್ನು ಬೆದರಿಸಿ ಚಾಸಾ-1 ನೇಯವರ ಮೇಲೆ ಹಲ್ಲೆ ಮಾಡಿ ಅವರಿಗೆ ಗಾಯಪಡಿಸಿರುತ್ತೀರಿ ಮತ್ತು ಈ ಕಾರಣದಿಂದ ನೀವು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 332 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ, ಚಾಸಾ.1 ಮಹಮ್ಮದ್ ಹೆಚ್.ಎಂ. ರವರು ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ನೀವು ಆರೋಪಿ ಅಲ್ಲಿಗೆ ಬಂದು, ಚಾಸಾ-1 ರವರ ಜೊತೆ ಗಲಾಟೆ ಮಾಡಿ, ಆತನ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿ, ನಂತರ ಕಂಪ್ಯೂಟರ್ ಕೊಠಡಿಗೆ ಅಳವಡಿಸಿದ್ದ 2 ಸಿ.ಪಿ.ಯು. 2 ಮಾನಿಟರ್, 2 ಪ್ರಿಂಟರ್, ಒಂದು ಬಯೋಮ್ಯಾಟ್ರಿಕ್ ಗಳನ್ನು ಕೆಳಗೆ ಬೀಳಿಸಿದ್ದು ಅದರಲ್ಲಿ ಒಂದು ಮಾನಿಟರ್ ಕೆಳಕ್ಕೆ ಬಿದ್ದು ಹಾಳಾಗಿದ್ದು ಇದರಿಂದ ರೂ.75000/-ದಷ್ಟು ನಷ್ಟಉಂಟಾಗಿರುತ್ತದೆ ಮತ್ತು ಈ

ಕಾರಣದಿಂದ ನೀವು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 427 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಮೇಲಿನ ದೋಷಾರೋಪಣೆಗೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕು ಎಂದು ಈ ಮೂಲಕ ನಿರ್ದೇಶಿಸುತ್ತೇನೆ.

**ದಿನಾಂಕ 19 ನೇ ಮೇ ತಿಂಗಳು 2023 ನೇ ಇಸವಿ.**

**(ಟಿ.ಎನ್. ಇನವಳ್ಳಿ)**
**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ಃ 167/2021**

**ಫಿರ್ಯಾದುದಾರರುಃ** ರಾಜ್ಯದ ಪರ ಆಲೂರು ಪೊಲೀಸರು

ವಿರುದ್ಧ

**ಆರೋಪಿ** **ಪುಟ್ಟರಾಜು**

| | | |
|---|---|---|
| ಆರೋಪಿಯ ಹೆಸರು | ಃ | ಪುಟ್ಟರಾಜು |
| ತಂದೆಯ ಹೆಸರು | ಃ | ಲೇಟ್ ಬೀರೇಗೌಡ |
| ವಯಸ್ಸು | ಃ | 47 ವರ್ಷ |
| ವೃತ್ತಿ | ಃ | - |
| ವಾಸ | ಃ | ಮಡಬಲು ಗ್ರಾಮ, ಪಾಳ್ಯ ಹೋಬಳಿ,<br>ಆಲೂರು ತಾಲ್ಲೂಕು, ಹಾಸನ ಜಿಲ್ಲೆ |

**ಃಆಪಾದನೆಃ**

ಪ್ರಶ್ನೆ 1ಃ ಈಗ ನಿನಗೆ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುವೆಯಾ?

ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಗೆ ಒಳಪಡುತ್ತೀಯಾ?

ಉತ್ತರಃ

**ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿದ್ದು, ಆರೋಪಿಯು ಕೊಟ್ಟ ಉತ್ತರವನ್ನು ಆತನು ಹೇಳಿದಂತೆಯೇ ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.**

**ದಿನಾಂಕ 19 ನೇ ಮೇ ತಿಂಗಳು 2023 ನೇ ಇಸವಿ.**

**(ಟಿ.ಎನ್. ಇನವಳ್ಳಿ)**
**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**